

ಸನ್ನಿಧಿಯಲ್ಲಿ ತಮ್ಮ ದನಿ ಸ್ವಲ್ಪ ಎತ್ತರವಾಯಿತೇನೋ ಎಂದು ತವಕಿಸಿದರು.

"ಹೌದು, ಅಪ್ಪ. ಅದು ನಾನೇ" ಅವಳ ನೋಟ ವೆಂಕಟರಮಣನ ಮೇಲೆ ನೆಟ್ಟಿತ್ತು. ಕಲರವದೊಂದಿಗೆ ಗರ್ಭಗುಡಿಯ ಕಡೆಗೆ ತಿರುಗಿದರು ಪೆರಿಯಾಳ್ವಾರ್. ಯಾವುದೋ ಒಂದು ಬೆಳಕು ಅವರನ್ನು ಸೆಳೆಯುವಂತೆ ಕಂಡಿತು. ರಂಗನಾಯಕಿಯ ಮೇಲೆ ಆ ಬೆಳಕು ಇಳಿಯಿತು. ಗರ್ಭಗುಡಿಯಲ್ಲಿ ಒಂದು ಸೊಡರಿನಂತೆ ಅಲೆದಾಡಿತು. ವೇಗವೇಗವಾಗಿ ಬಳುಕುವ ಸೊಡರು. ಮೆಲ್ಲಗೆ ತಣಿದು ನೆಲೆಯಾಗಿ ಬೆಳಗಿತು. ಕಪ್ಪುಕೇಶದೊಂದಿಗೆ, ಹಳದಿ ಉಡುಪಿನೊಂದಿಗೆ ಒಂದು ಕೈಯಲ್ಲಿ ತಾವರೆ ಹೂ ಮತ್ತೊಂದು ಕೈಯಲ್ಲಿ ಅಭಯ ಮುದ್ರೆಯೊಂದಿಗೆ ರಂಗನಾಯಕಿ. ಕಪ್ಪಗೆ ಹೊಳೆಯುವ ಮುಖದಲ್ಲಿ ಪಟ್ ಎಂದು ಕಣ್ಣುಗಳು ತೆರೆದವು. ಬೆಳಕಿನ ಹೊಳೆ. ಆಂಡಾಳ್ ಮುಖವದು. ಅದೇ ಆ ಕಣ್ಣುಗಳು. ಅದೇ ಗುಂಗುರು ಕೂದಲು. ಅದೇ ಹಣೆ. ಅದೇ ಕೆನ್ನೆ. ಅದೇ ಮುದ್ದು. ಕನಸು ಕಾಣುವಂತಿತ್ತು. ಮರುಕ್ಷಣ ಆಲೋಚನೆಗಳ ಓಟ ತಡೆಯಾಗಿ ಆ ಆಕಾರದ ನೋಟ ತಂದ ಬೆರಗಿನಲ್ಲಿ ಮಾತು ಬಾರದೇ ಹೆಪ್ಪುಗಟ್ಟಿ ನಿಂತರು. ಅವಸರದಿಂದ ಪಕ್ಕಕ್ಕೆ ತಿರುಗಿನೋಡಿದರು. ಮತ್ತೆ ಕಣ್ಣು ಮುಚ್ಚಿಕೊಂಡು ಧ್ಯಾನದಲ್ಲಿ ಮುಳುಗಿಹೋದಳು ಆಂಡಾಳ್. ಅದೇ ಅವಸರದೊಂದಿಗೆ ಗರ್ಭಗುಡಿಯನ್ನು ನೋಡಿದರು. ಪರವಶತೆ ತುಂಬಿದ ಆಂಡಾಳ್ ಮುಖವೇ ಅಲ್ಲೂ ಕಂಡಿತು. ಹೊರಗೆ ಗಂಟೆ ಧ್ವನಿಗೈದಿತು. ತಕ್ಷಣ ಒಳಗೆ ಮಣಿಮಂಟಪದ ಗಂಟೆಗಳು ನಾದವೆಬ್ಬಿಸ ತೊಡಗಿದವು. ಮನಗಳಲ್ಲಿ ನಾದತರಂಗಗಳು ಎದ್ದವು. ಪುರೋಹಿತರು ಬುಟ್ಟಿಯಲ್ಲಿದ್ದ ಒಂದೊಂದು ಹೂವನ್ನು ತೆಗೆದು ಗರ್ಭಗುಡಿಯಲ್ಲಿ ದೇವರಿಗೆ ಅರ್ಪಣೆ ಮಾಡುತ್ತಿದ್ದರು. ಮಂಟಪ ತುಂಬ ನಾರಾಯಣ ಘೋಷ ಎದ್ದಿತು.

ಪೆರಿಯಾಳ್ವಾರ್, ಗೊಂದಲದಿಂದ ಹೊರಬರಲಾಗದೆ ನೆನಪುಗಳೊಳಗೆ ಸರಿದರು. "ಭಗವಂತಾ, ಯಾರು ಈ ಆಂಡಾಳ್? ಇವಳನ್ನು ಯಾಕೆ ಅನಾಥಳಾಗಿ ಹುಟ್ಟಿಸಿದೆ? ನನ್ನ ಕಣ್ಣಿಗೆ ಅವಳನ್ನು ಯಾಕೆ ತೋರಿಸಿದೆ? ತಂದೆಯ ವಾತ್ಸಲ್ಯವನ್ನು ಯಾಕೆ ನಾನು ಅರಿಯುವಂತೆ ಮಾಡಿದೆ? ಅವಳು ಹೇಗೆ ನನ್ನನ್ನು ಒಪ್ಪಿಕೊಂಡಳು? ಅವಳು ನೀನೇ? ನಾನೂ ನೀನೇ? ಎಲ್ಲವೂ ನೀನೇ? ನನಗೆ ಯಾಕೆ ಅರ್ಥವಾಗುತ್ತಿಲ್ಲ? ಯಾವ ಪ್ರೀತಿ ನನ್ನನ್ನು ತಡೆಯುತ್ತಿದೆ?" ಅವರ ಗಂಟಲು ಗದ್ಗದಿಸಿತು. ಎದೆ ಏರಿ ಇಳಿಯಿತು. ತಲೆಯ ಮೇಲಕ್ಕೆ ಕೈಗಳನ್ನು ಎತ್ತಿದರು. ಅವರ ಕಣ್ಣು ತುಂಬಿತು.

●